35	ಮಂಚನಬೆಲೆ	1.220
36	ಚುಲ್ಕಿನಾಲಾ	1.17
37	ಉಡುತೊರೆಹಳ್ಳ	0.670
ಟಿಪ್ಪಣಿ: ಅಣೆಕಟ್ಟುಗಳು ಪೂರ್ಣಗೊಂಡಿವೆ. ಸಂಬಂಧಿತ ನಾಲಾ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ.		

ಮಡಿಲು ಕಿಟ್ ಸರಬರಾಜು

274 : (417)

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ), ಮಾನ್ಯ ವಿಧಾನ ಸಭಾ ಸದಸ್ಯರು

ಪ್ರಶ್ನೆ

ಅ) ಮಡಿಲು ಕಿಟ್ ಎಷ್ಟು ಸರಬರಾಜು ಆಗುತ್ತದೆ, ಆರೋಗ್ಯ ಇಲಾಖೆಯಿಂದ ಎಷ್ಟು ದರ ನಿಗಧಿಪಡಿಸಲಾಗಿದೆ;

ಆ) ಹಾಗಿದ್ದಲ್ಲಿ, ಕೈಮಗ್ಗ ನಿಗಮಕ್ಕೆ ಎಷ್ಟು ದರ ನಿಗಧಿಪಡಿಸಲಾಗಿದೆ; ಸರಬರಾಜುದಾರರಿಗೆ ಎಷ್ಟು ದರ ನಿಗಧಿಪಡಿಸಲಾಗಿರುತ್ತದೆ; ಇದೇ ಮಾದರಿ ಕಿಟ್ ಪ್ರಸಕ್ತ ಮಾರುಕಟ್ಟೆಯ ದರ ಎಷ್ಟು? (ಪೂರ್ಣ ವಿವರ ನೀಡುವುದು)

ಶ್ರೀ ಆರ್. ವರ್ತೂರು ಪ್ರಕಾಶ್ (ಜವಳಿ ಸಚಿವರು ಕರ್ನಾಟಕ ಸರ್ಕಾರ)

ಉತ್ತರ

ಅ) **NRHM Scheme**ಅಡಿಯಲ್ಲಿ ಆರೋಗ್ಯ ಇಲಾಖೆಯಿಂದ 4,30,000 ಮಡಿಲು ಕಿಟ್‌ಗಳಿಗೆ ಸರಬರಾಜು ಆದೇಶ ಬಂದಿದ್ದು, 03.12.2012 ರವರೆಗೆ 2,58,000 ಮಡಿಲು ಕಿಟ್‌ಗಳನ್ನು ನಿಗಮದ ವತಿಯಿಂದ ಆರೋಗ್ಯ ಇಲಾಖೆಗೆ ಸರಬರಾಜು ಮಾಡಲಾಗಿದೆ.

ಆರೋಗ್ಯ ಇಲಾಖೆಯಿಂದ ಪ್ರತಿ ಮಡಿಲು ಕಿಟ್‌ಗೆ ರೂ.1,201.20 ದರ ನಿಗಧಿಪಡಿಸಲಾಗಿದೆ.

Under the NRHM Scheme of Health & Family Welfare Department, KHDC has received orders to supply for 4,30,000 Madilu Kits. Out of which, 2,58,000 Kits has already been supplied as on 03.12.2012

The Health & Family Welfare Department has fixed Rs.1,201.20 per Madilu Kit.

ಆ) ಕೈಮಗ್ಗ ನಿಗಮಕ್ಕೆ ಪ್ರತಿ ಮಡಿಲು ಕಿಟ್‌ಗೆ ರೂ.1,201.20 ದರ ನಿಗಧಿಪಡಿಸಲಾಗಿದೆ.

ಸರಬರಾಜುದಾರರಿಗೆ ಪ್ರತಿ ಮಡಿಲು ಕಿಟ್‌ಗೆ ಸಾರಿಗೆ, ಗುಣ ನಿಯಂತ್ರಣ, ನಿರ್ವಹಣೆ ವೆಚ್ಚ ಮತ್ತು ಮುದ್ರಣದ ವೆಚ್ಚವನ್ನೊಳಗೊಂಡು ರೂ.971.00 ನಿಗಧಿಪಡಿಸಲಾಗಿದೆ.

ಪ್ರಸ್ತುತ ಮಡಿಲು ಕಿಟ್‌ನ ಮಾರುಕಟ್ಟೆ ದರವು ಅಂದಾಜು ರೂ.1,100.00 ಆಗುತ್ತದೆ.

ವಿವರಗಳು:

- ಮಡಿಲು ಕಿಟ್‌ಗಳು –

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು:–

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು "ಮಡಿಲು" ಎಂಬ ಕಾರ್ಯಕ್ರಮವನ್ನು 2007ರಿಂದ ಪ್ರಾರಂಭಿಸಿರುತ್ತದೆ. ಮಡಿಲು ಕಿಟ್‌ನಲ್ಲಿ 13 ಸಾಮಾಗ್ರಿಗಳಾದ (ಜಮಖಾನ, ಚೆಕ್ ಬೆಡ್‌ಶೀಟ್‌ಗಳು, ಡಿಸೈನ್ ಬೆಡ್‌ಶೀಟ್‌ಗಳು, ಚೆಕ್ ಟವಲುಗಳು, ಮಗುವಿಗೆ ಮುದ್ರಿತ ಬೆಡ್‌ಶೀಟ್‌ಗಳು, ಮಗುವಿಗೆ ಜಬ್ಲಾ, ಬಾಣಂತಿಗೆ ಸ್ಯಾನಿಟರಿ ಪ್ಯಾಡ್‌ಗಳು, ಹತ್ತಿ ಡಯಾಪರ್‌ಗಳು, ಮಗುವಿಗೆ ಫ್ಲೆನಲ್ ಬೆಡ್‌ಶೀಟ್‌ಗಳು, ಬಾಣಂತಿಯರಿಗೆ ಹೊಟ್ಟೆಯ ಕೆಳಗಿನ ಬೆಲ್ಟ್‌ಗಳು, ಮಗುವಿಗೆ ರಬ್ಬರ್ ಶೀಟ್‌ಗಳು, ಮಗುವಿಗೆ ಉಣ್ಣೆ ಸ್ವೆಟರ್ ಸೆಟ್‌ಗಳು, ಜಿಪ್‌ವುಳ್ಳ ಮುದ್ರಿತ ಪ್ಲಾಸ್ಟಿಕ್ ಚೀಲಗಳನ್ನೊಳಗೊಂಡಿರುತ್ತದೆ)

- ಈ ಯೋಜನೆಯಡಿಯಲ್ಲಿ ಪ್ರಾರಂಭದಲ್ಲಿ ಬಿ.ಪಿ.ಎಲ್ ಕಾರ್ಡು ಹೊಂದಿರುವ ಬಾಣಂತಿಯರಿಗೆ ಮಡಿಲು ಕಿಟ್ ವಿತರಿಸಲಾಗುತ್ತಿತ್ತು. ಪ್ರಸ್ತುತ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಯಾದ ಎಲ್ಲಾ ಬಾಣಂತಿಯರಿಗೆ ಈ ಯೋಜನೆಯನ್ನು ವಿಸ್ತರಿಸಲಾಗುತ್ತಿದೆ.

The Health & Family Welfare Department has fixed Rs.1,201.20 per Madilu Kit.

The Karnataka Handloom Development Corporation Ltd. is procuring at the rate of Rs.971.00 per Madilu Kit which inclusive of transportation, Quality Check, Handling & Printing charges.

At Present the Market Rate of each Madilu Kit is approximately Rs.1,100.00

Details:

Madilu Kits-

Health & Family Welfare Services

Govt.of Karnataka has introduced Madilu programme through Health & Family Welfare Department since 2007.

Madilu kits consisting of 13 items (i.e. Jamkhana, Checks bedsheets, Design bedsheets, check towels, printed bedsheet for baby, child jubla, sanitary pad for mother, cotton diapers, flannel bedsheet for baby, abdominal belt for mother, rubber sheet for baby, baby sweater set, printed plastic bag with zip) both for mother and child.

In the beginning Madilu kits were given to women having BPL card. And now it has been extend to all women admitted for delivery at Government hospitals throughout Karnataka.

ಗಾರ್ಮೆಂಟ್ಸ್ ಉದ್ಯಮದ ಚೈತನ್ಯ

315 : (581)

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮೀ ಲೇಔಟ್)

ಪ್ರಶ್ನೆ

ಅ) ವಿಶ್ವದ ಅಪೇರೆಲ್ಸ್ ಸಿಟಿ ಎಂದೆ ಕರೆಸಿಕೊಂಡಿರುವ ಬೆಂಗಳೂರಿನಲ್ಲಿ ಕುಸಿದಿರುವ ಗಾರ್ಮೆಂಟ್ಸ್ ಉದ್ಯಮದ ಚೈತನ್ಯಕ್ಕೆ ಅದರ ಸಿಬ್ಬಂದಿಗಳಿಗೆ ಕನಿಷ್ಠ ಸೌಲಭ್ಯ ಒದಗಿಸಲು ಸರ್ಕಾರದ ಕ್ರಮ ಕೈಗೊಂಡಿದೆಯೇ;

ಆ) ಗ್ರಾಮೀಣ ಪ್ರದೇಶಗಳಲ್ಲಿ ಜವಳಿ ಉದ್ಯಮವನ್ನು ವಿಸ್ತರಿಸಿ, ಉದ್ಯೋಗ ಕಲ್ಪಿಸಲು ಸರ್ಕಾರ ಕ್ರಮ ಕೈಗೊಂಡಿರುವ ಯೋಜನೆಗಳು ಯಾವುವು;

ಇ) ಅಪೇರಲ್ಸ್ ಪಾರ್ಕ್‌ಗಳಿಗಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮೀಸಲಿಟ್ಟ ಭೂಮಿಯ ಸದ್ಬಳಕೆ ಆಗಿದೆಯೇ; ನಿಗದಿತ ಕಾಲಮಿತಿಯಲ್ಲಿ ಭೂಮಿ ಬಳಸಿಕೊಳ್ಳದಿದ್ದಲ್ಲಿ, ಅಂತಹ ಕಂಪನಿಗಳಿಂದ ಭೂಮಿಯನ್ನು ಹಿಂಪಡೆಯಲಾಗಿದೆಯೇ;

ಈ) ಇತ್ತೀಚೆಗೆ ಜರುಗಿದ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶದಲ್ಲಿ ಜವಳಿ ಉದ್ಯಮಕ್ಕೆ ಹರಿದು ಬಂದ ಬಂಡವಾಳ ಎಷ್ಟು; ಮಾಡಿಕೊಂಡ ಒಡಬಂಡಿಕೆ ಅನುಷ್ಠಾನಗೊಂಡಿದೆಯೇ;

ಉ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಪೇರಲ್ ತರಬೇತಿ ನೀಡಲು ಯಾವ ಸಂಸ್ಥೆಗೆ (ತರಬೇತಿ ಕೇಂದ್ರ) ನೀಡಲಾಗಿದೆ. ಆ ಸಂಸ್ಥೆಗಳಿಗೆ ಸರ್ಕಾರ ನೀಡುತ್ತಿರುವ ಸಹಾಯಧನವೆಷ್ಟು? (ವಿವರ ನೀಡುವುದು)